**ಓ ಎಸ್ ನಂಃ 144-14**
**ಪಿ ಡಬ್ಲ್ಯೂ ಃ 1**

**ದಿಃ 16-10-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 14 ನೇ ಪ್ರತಿವಾದಿ ಪರ ಶ್ರೀ ಎಲ್ ಎನ್ ವಕೀಲರಿಂದ**

69. ನಾನು ವಿದ್ಯಾವಂತೆ ಅಂದರೆ ಸರಿ. 3 ನೇ ಪ್ರತಿವಾದಿ ಯಾವಾಗ ಮೃತಪಟ್ಟರು ಎಂದು ನನಗೆ ದಿನಾಂಕ ಗೊತ್ತಿಲ್ಲ. ಅವರು ಎಲ್ಲಿ ಮೃತಪಟ್ಟರು ಎಂದು ಕೂಡಾ ಗೊತ್ತಿಲ್ಲ. 3 ನೇ ಪ್ರತಿವಾದಿಗೆ ಮದುವೆ 1961 ರಲ್ಲಿ ಕೇತೋಹಳ್ಳಿಯಲ್ಲಿ ನಡೆದಿರುತ್ತದೆ. 3 ನೇ ಪ್ರತಿವಾದಿ ಗಂಡ ಬ್ಯಾಲಕೆರೆಯಲ್ಲಿ ವಾಸವಿದ್ದಾರೆ. ಅವರ ಗಂಡ 1971 ರಲ್ಲಿ ಕೇತೋಹಳ್ಳಿಯಲ್ಲಿ ಮೃತಪಟ್ಟರು. ನಾನು ನನ್ನ ದಾವಾ ಪತ್ರದಲ್ಲಿ ದಾವ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ಹೇಳಿಲ್ಲ, ಅವು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು.

70. ಪ್ರತಿವಾದಿ 14 ರವರು ಪ್ರತಿವಾದ ಪತ್ರ ಸಲ್ಲಿಸಿದ ನತಂರ ದಾವಾ ಸ್ವತ್ತುಗಳು ಸ್ವಯಾರ್ಜಿತ ಆಸ್ತಿಗಳು ಎಂದು ನಾವು ಹೇಳಿರುವುದು ಅಂದರೆ ಸಾಕ್ಷಿ ಮೊದಲೇ ಹೇಳಿದ್ದೆವು ಎಂದು ನುಡಿಯುತ್ತಾರೆ. ನನ್ನ ಗಂಡ ಕೆಲಸದಲ್ಲಿದ್ದರು ಅಂದರೆ ಸರಿ. ನನ್ನ ಗಂಡ ಕೆಲಸದಲ್ಲಿದ್ದಾಗ ಕಡಬ, ಗುಬ್ಬಿ ಹಾಗೂ ತುಮಕೂರಿನಲ್ಲಿ ವಾಸವಿದ್ದೆ. ದಾವಾ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಅಂದರೆ ಸರಿ. ನನ್ನ ತಂದೆ ಜೀವಿತ ಕಾಲದಲ್ಲಿ ಏನೇನು ಕೆಲಸಗಳು ಹಾಗೂ ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಗೊತ್ತು. ನನ್ನ ತಂದೆಗೆ ಸ್ವಂತ ಆಸ್ತಿಯಲ್ಲಿ ಅವರು ಯಾರಿಗೂ ವಿಲೇವಾರಿ ಮಾಡಲು ಹಕ್ಕು ಇತ್ತು ಅಂದರೆ ಸರಿ. ಪ್ರತಿವಾದಿ 8,9 ಮತ್ತು 14 ರವರನ್ನು ನನ್ನ ತಂದೆ ಸಾಕಿ ಸಲುಹಿದ್ದಾರೆ ಅಂದರೆ ಸರಿ.

71. ನನ್ನ ತಂದೆಯನ್ನು 6 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ. 14 ನೇ ಪ್ರತಿವಾದಿಯನ್ನು ನನ್ನ ತಂದೆ ಹಾಗೂ 6 ನೇ ಪ್ರತಿವಾದಿ ಮದುವೆ ಮಾಡಿಕೊಟ್ಟಿರುವುದು ಅಂದರೆ ಸಾಕ್ಷಿ ನನ್ನ ತಂದೆ ಆಗ ಮೃತಪಟ್ಟಿದ್ದರು ಹಾಗೂ 6 ನೇ ಪ್ರತಿವಾದಿ ಮಾಡಿಲ್ಲ ಎಂದು ನುಡಿಯುತ್ತಾರೆ. 1981 ರಲ್ಲಿ ನನ್ನ ತಂದೆ ಆರೋಗ್ಯವಾಗಿದ್ದರು ಅಂದರೆ ಸರಿ. ನನ್ನ ತಂದೆ 1982 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಡುವ ಎರಡು ತಿಂಗಳ ಹಿಂದಿನಿಂದ ಆರೋಗ್ಯ ಸರಿಯಿರಲಿಲ್ಲ. ನನ್ನ ತಂದೆಗೆ ಚೆನ್ನಾಗಿ ವ್ಯವಹಾರ ಜ್ಞಾನ ಇತ್ತು ಅಂದರೆ ಸರಿ.

72. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ಅವರು ಆರೋಗ್ಯ ಇದ್ದಾಗ ಕೆಲವೊಂದು ಆಸ್ತಿಗಳ ಬಗ್ಗೆ

ವಿಲ್ ಮಾಡಿದ್ದಾರೆಂದರೆ ಸರಿಯಲ್ಲ. ನನ್ನ ತಂದೆಯನ್ನು ನಾನು ಕೊನೆ ಬಾರಿ 1982 ರ ಅಕ್ಟೋಬರ್ ಅಲ್ಲಿ ನೋಡಿರುತ್ತೇನೆ. ನನ್ನ ತಂದೆ ಯಾವುದೇ ವ್ಯವಹಾರ ಮಾಡುವಾಗ ಮನೆಯಲ್ಲಿ ಚರ್ಚೆ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆ ಮಾಡಿದ ವಿಲ್ ಅನ್ನು ಓದಿ ತಿಳಿದುಕೊಂಡಿದ್ದೀರ ಅಂದರೆ ಸಾಕ್ಷಿ ನನ್ನ ತಂದೆ ವಿಲ್ ಮಾಡಿಲ್ಲ ಎಂದು ನುಡಿಯುತ್ತಾರೆ.

73. ನಮ್ಮ ಆಸ್ತಿಗಳಿಗೆ ಕೆಲವೊಂದು ಅಡ್ಡ ಹೆಸರು ಇದೆ ಎಂದರೆ ಸರಿ. ಮರಳುಸಿದ್ದಯ್ಯ ಎಂಬ ಮನೆ ಆಸ್ತಿ ಇದೆ ಅಂದರೆ ಸರಿ. ಅದರ ವಿಸ್ತೀರ್ಣ ಸುಮಾರು 50*50 ಅಡಿ ಇರಬಹುದು. ಅದೇ ಆಸ್ತಿಯನ್ನು ವಿಲ್ ಮಾಡಿರುವುದು ಅಂದರೆ ಸರಿಯಲ್ಲ. ಜಯಮ್ಮನಿಗೆ ಒಂದು ಸೈಟು ಹಾಗೂ ಮನೆ ವಿಲ್ ಮೂಲಕ ನನ್ನ ತಂದೆ ಕೊಟ್ಟಿದ್ದಾರೆಂದರೆ ಸರಿಯಲ್ಲ. ಒಟ್ಟು ಆಸ್ತಿಯನ್ನು 5 ಮತ್ತು 6 ನೇ ಪ್ರತಿವಾದಿಗಳಿಗೆ ಹಂಚಿಕೆ ಆಗಬೇಕು ಎಂದು ಆ ವಿಲ್ ಅಲ್ಲಿ ಬರೆದಿದ್ದಾರೆಂದರೆ ಸರಿಯಲ್ಲ.

74. ನನ್ನ ತಾಯಿ ಮೇ 2010 ರಲ್ಲಿ ಮೃತಪಟ್ಟಿರುತ್ತಾರೆ. 7 ನೇ ಪ್ರತಿವಾದಿಯ ಮದುವೆಯನ್ನು 6 ನೇ ಪ್ರತಿವಾದಿ ಮಾಡಿದರು ಅಂದರೆ ಸಾಕ್ಷಿ ಅಕ್ಕ ಮತ್ತು ಭಾವ ಸೇರಿ ಮಾಡಿದ್ದಾರೆಂದು ನುಡಿಯುತ್ತಾರೆ. 7 ನೇ ಪ್ರತಿವಾದಿಯ ಮದುವೆಗೆ ಮಾಡಿದ ಸಾಲಕ್ಕೆ 14 ನೇ ಸ್ವತ್ತನ್ನು ಮಾರಾಟ ಮಾಡಿತಿದ್ದಾರೆಂದರೆ ಸರಿಯಲ್ಲ. ಅದರಲ್ಲಿ ಉಳಿದ ಪ್ರತಿಫಲದ ಹಣದಲ್ಲಿ ಪ್ರತಿಯೊಬ್ಬರಿಗೂ ತಲಾ ರೂ.50 ಸಾವಿರದಂತೆ ಹಂಚಿದ್ದಾರೆಂದರೆ ಸರಿಯಲ್ಲ. ನನ್ನ ತಂದೆ ಅವರ ಎಲ್ಲಾ ಸ್ವತ್ತುಗಳಿಗೂ ವಿಲ್ ಅಲ್ಲಿ ವಿಲೇ ಮಾಡಿ ಉಳಿದವರಿಗೆ ಯಾವುದೇ ಹಕ್ಕು ಇಲ್ಲ ಎಂದು ಹೇಳಿದ್ದಾರೆಂದರೆ ಸರಿಯಲ್ಲ. ನನ್ನ ತಂದೆ ವಿಲ್ ಮಾಡಿರುವ ಮಾಹಿತಿ ಇದ್ದರೂ ಕೂಡಾ ಈಗ ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಅದು ಸುಳ್ಳು ವಿಲ್ ಎಂದು ನುಡಿಯುತ್ತಾರೆ. ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಆಗಿರುವುದರಿಂದ ನನಗೆ ಯಾವುದೇ ಭಾಗದ ಹಕ್ಕು ಇಲ್ಲ ಅಂದರೆ ಸರಿಯಲ್ಲ.

ಉಳಿದ ಪ್ರತಿವಾದಿಗಳು ಹಾಗೂ ಅವರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಅವರ ಪರ ಪಾಟೀ ಸವಾಲನ್ನು ಇಲ್ಲ ಎಂದು ಪರಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**